**ದಿನಾಂಕಃ 01.04.2026 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ.ಪಿ., ವಕೀಲರಿಂದಃ**

ನಿಪಿ.1 ಕ್ಕೆ ನಾನು ಸಾಕ್ಷಿದಾರನಲ್ಲ. ನಿಪಿ.1 ಕ್ಕೆ ಯಾರು ಸಾಕ್ಷಿದಾರರು ಮತ್ತು ಪಕ್ಷಗಾರರು ಎಂದು ನನಗೆ ಗೊತ್ತಿಲ್ಲ. ವಾದಿಗೆ ಮಾರಾಟ ಮಾಡಿದ್ದ ವ್ಯಕ್ತಿಯ ತಂದೆಗೆ ಜಮೀನು ಮಂಜೂರು ಆಗಿರುವ ಚಕ್ಕುಬಂದಿಯನ್ನು ನಾನು ನೋಡಿರುವುದಿಲ್ಲ. ಅದೇ ರೀತಿ ಯಾವ ಆಸ್ತಿ ಯಾವ ರೀತಿಯ ಚಕ್ಕುಬಂದಿಯ ನಡುವೆ ಮಂಜೂರಾಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಯಾವ ಇಸವಿಯವರೆಗೂ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 145 ರ ಹಿಂದಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೇ ನಂಬರ್ 139 ರ ಹಿಂದಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ.

ಸರ್ವೇ ನಂಬರ್ 145 ರ ಪೂರ್ವಕ್ಕೆ ನಮ್ಮ ಆಸ್ತಿ ಸರ್ವೇ ನಂಬರ್ 109, ಆದರೆ ಅದು ಗಂಗಲಮ್ಮನವರ ಹೆಸರಿನಲ್ಲಿದೆ. ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಅರಣ್ಯ ಇದೆ ಮತ್ತು ದಕ್ಷಿಣಕ್ಕೆ ಸರ್ವೇ ನಂಬರ್ 139 ಇದೆ.

ಸರ್ವೇ ನಂಬರ್ 139 ರ ಪೂರ್ವಕ್ಕೆ ಟಿ ಎನ್ ಸುಬ್ಬಾರೆಡ್ಡಿ ರವರ ಆಸ್ತಿ ಇದೆ ಆದರೆ ಸರ್ವೇ ನಂಬರ್ ಗೊತ್ತಿಲ್ಲ. ಪಶ್ಚಿಮಕ್ಕೆ ಅರಣ್ಯ , ಉತ್ತರಕ್ಕೆ ಸರ್ವೇ ನಂಬರ್ 145, ದಕ್ಷಿಣಕ್ಕೆ ತೋಟಿ ವೆಂಕಟಪ್ಪ ರವರ ಆಸ್ತಿ ಇದೆ ಆದರೆ ಸರ್ವೇ ನಂಬರ್ ಗೊತ್ತಿಲ್ಲ.

ತುಮ್ಮಲಪಲ್ಲಿ ಗ್ರಾಮದ ಸರ್ವೇ ನಂಬರ್ 120 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೇ ನಂಬರ್ 120 ರ 24 ಗುಂಟೆಯ ಪೂರ್ವಕ್ಕೆ ರಸ್ತೆ , ಪಶ್ಚಿಮ ಮತ್ತು ಉತ್ತರಕ್ಕೆ ಅರಣ್ಯ ಮತ್ತು ದಕ್ಷಿಣಕ್ಕೆ ಮಂಜೇವಾರಿಪಲ್ಲಿ ಗ್ರಾಮದ ಗಡಿ ಎಂದರೆ ನಾನು ನೋಡಿದ್ದೇನೆ. ತುಮ್ಮಲಪಲ್ಲಿ ಮತ್ತು ಮಂಜೇವಾರಿಪಲ್ಲಿ ಗ್ರಾಮ ಅಕ್ಕಪಕ್ಕದಲ್ಲಿದೆ ಎಂದರೆ ಸರಿ.

ಸರ್ವೇ ನಂಬರ್ 120 ರಲ್ಲಿ 10 ಗುಂಟೆ ಜಮೀನು ಪೂರ್ವಕ್ಕೆ ಕೆರೆ ಅಂಗಳ, ಪಶ್ಚಿಮಕ್ಕೆ ಅರಣ್ಯ , ಉತ್ತರಕ್ಕೆ ನಾರೆಪ್ಪ , ದಕ್ಷಿಣಕ್ಕೆ ಮುನೆಪ್ಪ ಈ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ.

ಸರ್ವೇ ನಂಬರ್ 120 ರಲ್ಲಿ 1 ಎಕರೆ 20 ಗುಂಟೆ ಜಮೀನು ಪೂರ್ವಕ್ಕೆ ಕೆರೆ ಅಂಗಳ, ಪಶ್ಚಿಮಕ್ಕೆ ಅರಣ್ಯ, ಉತ್ತರಕ್ಕೆ ವೆಂಕಟರವಣ, ದಕ್ಷಿಣಕ್ಕೆ ನಾರೆಪ್ಪ ಈ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ.

ಈಗ ಹೇಳಿದ್ದ ಸರ್ವೇ ನಂಬರ್ 120 ರ ಆಸ್ತಿಗಳಲ್ಲಿ ಶಬ್ಬೀರ್ ಅಥವಾ ಆತನ ತಂದೆ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿ. ಅದೇ ರೀತಿ ವಾದಿಯು ಸಹಾ ಸರ್ವೇ ನಂಬರ್ 120 ಆಸ್ತಿಗಳಲ್ಲಿ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿ. ಸರ್ವೇ ನಂಬರ್ 120 ರಲ್ಲಿ ಆಸ್ತಿಗಳು ಪ್ರತಿವಾದಿಯ ತಂದೆಗೆ ಮತ್ತು ಪ್ರತಿವಾದಿಗೆ ಸರ್ಕಾರದಿಂದ ಮಂಜೂರು ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ.

ಪ್ರಕರಣದ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.